# ಪರ್ಯಾಯ ಶೈಕ್ಷಣಿಕಯೋಜನೆ 2021-22

**ತರಗತಿ : 8** **ಮಾಹೆ : ನವೆಂಬರ್-2021** **ವಿಷಯ : ದ್ವಿತೀಯ ಭಾಷೆ-ಕನ್ನಡ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **01** | 1ನೇ ವಾರ | <u>ಸುಕ್ರಿಬೊಮ್ಮನಗೌಡ</u><br>* ಜನಪದ ಬರಹಗಾರರ ವಿದ್ವತ್ಶಕ್ತಿಯ ಬಗ್ಗೆ ಪರಿಚಯಿಸುವುದು . | * ಜನಪದ ಬರಹಗಾರರು ಓದು-ಬರಹ ಕಲಿಯದಿದ್ದರೂ, ಅವರ ಅದ್ಭುತವಾದ ವಿದ್ವತ್ ಮತ್ತು ಭಾಷಾ ಪ್ರತಿಭೆ, ನೆನಪಿನ ಶಕ್ತಿಯು ಎಂಥಹವರನ್ನು ಆಶ್ಚರ್ಯಗೊಳಿಸುತ್ತದೆ ಎಂಬುದನ್ನು ಸಂವಾದದ ಮೂಲಕ ವಿವರಿಸುವುದು. | |
| | | * ಬುಡಕಟ್ಟು ಜನಾಂಗಗಳ ಸಂಸ್ಕೃತಿಯ ಬಗ್ಗೆ ಚರ್ಚಿಸಿ ಅರ್ಥೈಸಿಕೊಳ್ಳುವುದು. | * ಬುಡಕಟ್ಟು ಜನಾಂಗಗಳ ಆಚಾರ-ವಿಚಾರ, ರೀತಿ-ನೀತಿಗಳು, ಬೆಟ್ಟಗುಡ್ಡ, ಮರಗಿಡ, ಪ್ರಾಣಿ-ಪಕ್ಷಿ, ನದಿ, ಮಳೆ ಎಲ್ಲವೂ ಅವರಿಗೆ ಬಹಳ ಆಪ್ತವಾಗಿರುವುದರ ಬಗ್ಗೆ ಮತ್ತು ಆಧುನಿಕತೆ ಪ್ರಭಾವದಿಂದ ಜಾನಪದ ಕಲೆ, ಸಂಸ್ಕೃತಿಗಳೂ ಅವನತಿಯತ್ತ ಸಾಗುವುದನ್ನು ನಿದರ್ಶನಗಳ ಮೂಲಕ ಚರ್ಚಿಸುವುದು. | * ಬುಡಕಟ್ಟು ಜನಾಂಗಗಳ ಸಂಸ್ಕೃತಿಯನ್ನು ಪಟ್ಟಿ ಮಾಡುವುದು. |
| | | * ಆಲಿಸುವಿಕೆಯ ಕೌಶಲ ಬೆಳೆಸುತ್ತ ಶಾಂತಿ ನಾಯಕರವರನ್ನು ಪರಿಚಯಿಸುವುದು. | * ಶಾಂತಿ ನಾಯಕರವರ ಕಾಲ,ಸ್ಥಳ,ಕೃತಿಗಳು ಮತ್ತು ಪ್ರಶಸ್ತಿಗಳನ್ನು ವಿಡಿಯೋ ಮತ್ತು ಚಿತ್ರಪಟ ತೋರಿಸುವ ಮೂಲಕ ಲೇಖಕರನ್ನು ಪರಿಚಯಿಸುವುದು.<br>* ಲೇಖಕರ ಪರಿಚಯದ ಆಡಿಯೋ ಕೇಳಿಸುವುದು. | * ಸರಳ ವಾಕ್ಯಗಳ ಮೂಲಕ ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯುವುದು. |
| | | * ಗದ್ಯ ಭಾಗದಲ್ಲಿ ಬಂದಿರುವ ಹೊಸ ಪದಗಳ ಪರಿಚಯಿಸುತ್ತ ಕಠಿಣಪದಗಳನ್ನು ಅರ್ಥೈಸುವುದು ಮತ್ತು ಆಯ್ದ ಪದಗಳಿಗೆ ಸ್ವಂತವಾಕ್ಯ ಮಾಡಿಸುವುದು. | * ಶಿಕ್ಷಕರು ಗದ್ಯಭಾಗದಲ್ಲಿ ಬಂದಿರುವ ಕಠಿಣ ಪದಗಳಿಗೆ ಅರ್ಥವನ್ನು ನಿಘಂಟಿನ ಸಹಾಯದಿಂದ ಹುಡುಕಿ ಅರ್ಥವನ್ನು ಅರ್ಥೈಸಿಕೊಂಡು ಮತ್ತು ಆಯ್ದ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸುವಂತೆ ತಿಳಿಸುವುದು. | *ಆಯ್ದ ಕಠಿಣ ಪದಗಳ ಅರ್ಥ ಬರೆಸುವುದು |

| | | | | |
|---|---|---|---|---|
| **02** | 2ನೇ ವಾರ | * ಓದುವಿಕೆ ಮತ್ತು ಆಲಿಸುವಿಕೆ ಕೌಶಲ ಬೆಳೆಸುತ್ತ ಆಯ್ದ ಪದಗಳಿಗೆ ವಿಭಕ್ತಿಯನ್ನು ಹೆಸರಿಸುವುದನ್ನುಅರಿಯುವುದು.<br><br>*ಜಾನಪದ ಗಣಿಯಾಗಿ ಸುಕ್ರಿ ಬೊಮ್ಮನಗೌಡರಿಗೆ ಕಾಡಿನ ಸಸ್ಯಗಳ ಬಗ್ಗೆ ಇರುವ ಜ್ಞಾನವನ್ನು ಸರ್ಮಪಕವಾಗಿ ವಿವರಿಸುವ ಸಾಮರ್ಥ್ಯ ಬೆಳೆಸಿಕೊಳ್ಳುವರು<br><br>* ಪಠ್ಯವನ್ನು ಆಲಿಸಿ ಮತ್ತು ಓದಿ ಸಾರಾಂಶವನ್ನುತಮ್ಮದೇ ಮಾತುಗಳಲ್ಲಿ ವಿವರಿಸುವುದು. | * ಶಿಕ್ಷಕರು ಗದ್ಯಭಾಗವನ್ನು ಸ್ವರಭಾರಯುಕ್ತವಾಗಿ,ಅರ್ಥಪೂರ್ಣವಾಗಿ ಓದುವರು ಮತ್ತು ವಿದ್ಯಾರ್ಥಿಗಳಿಗೂ ಓದುವಂತೆ ತಿಳಿಸುವರು ಜೊತೆಗೆ ಆಯ್ದ ಪದಗಳಿಗೆ ವಿಭಕ್ತಿಯನ್ನು ಬರೆಯುವ ರೀತಿಯನ್ನು ವಿವರಿಸುವುದು.<br><br>*ಸುಕ್ರಿಯವರ ತಂದೆ-ತಾಯಿಯಲ್ಲಿರುವ ವಾದ್ಯಗಾರಿಕ ಕಲೆಯ ಬಗ್ಗೆ<br>* ಅವರು ಬಾಲ್ಯದಲ್ಲಾಡುತ್ತಿದ್ದ ಜಾನಪದ ಆಟಗಳು, ಹಾಡುಗಳ ಬಗ್ಗೆ<br>* ಕಾಡಿನ ಸಸ್ಯಗಳ ಬಗ್ಗೆ ಅವರಿಗಿದ್ದ ಅಪರಿಮಿತ ಪಾಂಡಿತ್ಯದ ಬಗ್ಗೆ ಹಾಗೂ ಕಾಡಿನಲ್ಲಿರುವ ಔಷಧೀಯ ಸಸ್ಯಗಳ ಬಗ್ಗೆ ಪ್ರಶ್ನೋತ್ತರಗಳ ಮೂಲಕ ವಿವರಿಸುವುದು.<br><br>*ಸುಕ್ರಿಯವರು ಭಾಗವಹಿಸಿದ ಚಳವಳಿಗಳು ಮತ್ತು ಅವರಿಗೆ ದೊರೆತ ಪ್ರಶಸ್ತಿಗಳನ್ನು ವಿವರಿಸುವ ಮೂಲಕ ಪಠ್ಯದ ಸಾರಾಂಶವನ್ನು ವಿವರಿಸುವರು. | * ಗದ್ಯಭಾಗವನ್ನು ತಪ್ಪಿಲ್ಲದಂತೆ ಓದುವುದು.<br><br>* ಅಭ್ಯಾಸ ಹಾಳೆ – 01<br><br>*ಗದ್ಯಭಾಗಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು.<br><br>* ಸುಕ್ರಿಯವರಿಗೆದೊರೆತ ಪ್ರಶಸ್ತಿಗಳನ್ನು ಹೆಸರಿಸುವುದು.<br><br>ಅಭ್ಯಾಸ ಹಾಳೆ – 02 |
| **03** | 3ನೇ ವಾರ | * **ನನ್ನ ಹಾಗೆಯೆ**<br><br>* ಕಥೆ ಹೇಳುವ ಸಾಮರ್ಥ್ಯ ಬೆಳೆಸುವುದು.<br><br>* ಸರಳ ವಾಕ್ಯಗಳ ಮೂಲಕ ಸು.ರ.ಎಕ್ಕುಂಡಿ ಅವರನ್ನು ಪರಿಚಯಿಸುವುದು. | * ಮೌಲ್ಯಯುತವಾದ ಕಥೆಗಳನ್ನು ಆಯ್ದು ತರಗತಿಯಲ್ಲಿ ಹೇಳಿಸುವುದು ಮತ್ತು ಕಥೆ ಬರೆಯುವ ಹವ್ಯಾಸವನ್ನು ಬೆಳೆಸುವುದು.<br><br>* ಕವಿ ಪರಿಚಯದ ಆಡಿಯೋವನ್ನು ಕೇಳಿಸುವುದು ನಂತರ ಆಲಿಸಿದ ಮುಖ್ಯಾಂಶಗಳನ್ನು ಆಧರಿಸಿ ವಾಕ್ಯರೂಪದಲ್ಲಿ ಕೃತಿ, ಪ್ರಶಸ್ತಿಗಳನ್ನು ಬರೆಯಲು ತಿಳಿಸುವುದು. | * ಆಯ್ದ ಕಥೆಗಳನ್ನು ಬರೆಯುವುದು.<br><br>* ಸು.ರ.ಎಕ್ಕುಂಡಿಯವರ ಪರಿಚಯವನ್ನು ವಾಕ್ಯರೂಪದಲ್ಲಿ ಹೇಳುವುದು ಮತ್ತು ಬರೆಸುವುದು.<br><br>* ಆಯ್ದ ಪದಗಳಿಂದ ಸ್ವಂತವಾಕ್ಯ ಮಾಡಿಸುವುದು. |

| | | | | |
|---|---|---|---|---|
| | ನಾಲ್ಕನೇ ವಾರ | * ಸರಳ ಭಾಷಾಂಶಗಳನ್ನು ತಿಳಿಸುವುದು.<br><br>* ಓದುವಿಕೆ ಮತ್ತು ಆಲಿಸುವಿಕೆ ಕೌಶಲ ಬೆಳೆಸುವುದು.<br><br>* ಪದ್ಯಭಾಗದ ಪ್ರಮುಖಾಂಶಗಳನ್ನು ಆಲಿಸಿ ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಪಡೆಯುವರು.<br><br>* ವ್ಯಾಕರಣಾಂಶಗಳನ್ನು ಅರ್ಥೈಸಿಕೊಳ್ಳುವುದು. | *ಪದ್ಯಭಾಗದಲ್ಲಿ ಬಂದಿರುವ ಹೊಸಪದಗಳನ್ನು ನಿಘಂಟಿನ ಸಹಾಯದಿಂದ ಅರ್ಥೈಸಿ, ಸ್ವಂತ ವಾಕ್ಯ ಮಾಡಿಸುವುದು.<br><br>* ಪದ್ಯ ಭಾಗವನ್ನು ಸ್ವರ ಭಾರಯುಕ್ತವಾಗಿ, ಅರ್ಥಬದ್ಧವಾಗಿ ಓದುವರು ಮತ್ತು ವಿದ್ಯಾರ್ಥಿಗಳಿಂದಲೂ ತಪ್ಪಿಲ್ಲದಂತೆ ಓದಿಸುವುದು.<br><br>* ಭರತ ಮತ್ತು ಬಾಹುಬಲಿಯವರ ನಡುವಿನ ಯುದ್ಧದ ಬಗ್ಗೆ ಸಂಭಾಷಿಸುವುದು.<br>* ಬಾಹುಬಲಿಯು ದೂರದ ಬೆಟ್ಟದಲ್ಲಿ ನೆಲೆಯೂರಲು ಕಾರಣದ ಬಗ್ಗೆ<br>* ಬಾಹುಬಲಿಯ ಮಜ್ಜನದ ಬಗ್ಗೆ<br><br>* ಬಾಹುಬಲಿಯು ಕೈಗೊಂಡ ಘೋರ ತಪಸ್ಸಿನ ಬಗ್ಗೆ ಮಗು ಕೇಳುವ ಪ್ರಶ್ನೆಗಳಿಗೆ ಅಜ್ಜ ಉತ್ತರಿಸುವ ರೀತಿಯನ್ನು ಸಂಭಾಷಣೆಯ ಮೂಲಕ ವಿವರಿಸುವುದು.<br><br>* ದ್ವಿರುಕ್ತಿ–ಜೋಡುನುಡಿ ಮತ್ತು ನುಡಿಗಟ್ಟುಗಳನ್ನು ನಿದರ್ಶನಗಳ ಮೂಲಕ ವಿವರಿಸುವುದು ಮತ್ತು ವಿದ್ಯಾರ್ಥಿಗಳಿಂದ ಉದಾಹರಣೆಗಳನ್ನು ಮೌಖಿಕವಾಗಿ ಹೇಳಿಸುವುದು ಮತ್ತು ಬರೆಸುವುದು. | * ಅಭ್ಯಾಸ ಹಾಳೆ – 03<br><br>* ಪದ್ಯ ಭಾಗಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು.<br><br>* ದ್ವಿರುಕ್ತಿ–ಜೋಡುನುಡಿ ಮತ್ತು ನುಡಿಗಟ್ಟುಗಳಿಗೆ ಉದಾಹರಣೆ ಪಟ್ಟಿ ಮಾಡಿಸುವುದು<br><br>* ಅಭ್ಯಾಸ ಹಾಳೆ – 04 |

## ಅಭ್ಯಾಸ ಹಾಳೆ – 1

## ಸುಕ್ರಿಬೊಮ್ಮನ ಗೌಡ

**I. ಈ ಕೆಳಗಿನ ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ :**

**ಶಾಂತಿ ನಾಯಕ :**



**II. ಜಾನಪದ ಕಲೆಗಳು ಮತ್ತು ಜಾನಪದ ಆಟಗಳನ್ನು ಪಟ್ಟಿ ಮಾಡಿ:**

| ಜಾನಪದ ಕಲೆಗಳು | ಜಾನಪದ ಆಟಗಳು |
|---|---|
| | |
| | |
| | |
| | |
| | |
| | |

**III. ಒಂದು ವಾಕ್ಯದಲ್ಲಿ ಉತ್ತರಿಸಿ :**

1. ತಾರ್ಲೆಕುಣಿತ ಎಂದರೇನು ?

________________________________________________________

________________________________________________________

2. ಸುಕ್ರಿಯವರು ಆಡುತ್ತಿದ್ದ ಜಾನಪದ ಆಟಗಳಾವುವು ?

______________________________________________

3. ಸುಕ್ರಿಯವರು ಎಷ್ಟರಲ್ಲಿ ಜನಿಸಿದರು ?

______________________________________________

4. ಸುಕ್ರಿಯ ಪೂರ್ವಜರು ಬೆಳೆಯುತ್ತಿದ್ದ ಪ್ರಮುಖ ಬೆಳೆ ಯಾವುದು ?

______________________________________________

5. ಸುಕ್ರಿಯವರು ಯಾವ ಯಾವ ಸೊಪ್ಪುಗಳ ಬಗ್ಗೆ ತಿಳಿದಿದ್ದರು ?

______________________________________________

6. ಸುಕ್ರಿಯವರು ಯಾವ ಜಾನಪದ ಶಾಸ್ತ್ರಗಳ ಭಂಡಾರವಾಗಿದ್ದರು ?

______________________________________________

**IV . ಟಿಪ್ಪಣಿ ಬರೆಯಿರಿ:**

1. ಹಾಲಕ್ಕಿ ಕುಣಿತ : ______________________________________________

______________________________________________

______________________________________________

______________________________________________

______________________________________________

______________________________________________

______________________________________________

2. ಕುಂಬರಿ ಬೇಸಾಯ : ______________________________________________

______________________________________________

______________________________________________

______________________________________________

______________________________________________

3. ಸುಕ್ರಿಯವರ ಸಸ್ಯಜ್ಞಾನ : ______________________________

______________________________

______________________________

______________________________

______________________________

## ಅಭ್ಯಾಸ ಹಾಳೆ – 2

**I. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ :**

| **ಮಾದರಿ :** ಅತ್ಯುತ್ತಮ | ಅತಿ + ಉತ್ತಮ |
|---|---|
| ರಾಜ್ಯೋತ್ಸವ | |
| ಶೈಲಿಯಲ್ಲಿ | |
| ಚಿತ್ರವಿದೆ | |
| ಕ್ರೀಡಾಂಗಣ | |
| ಆಪ್ತವಾದ | |
| ಹಲ್ಗತ್ತಿ | |
| ಅತ್ಯುನ್ನತ | |
| ಇವನೊಬ್ಬ | |
| ತಮ್ಮೊಳಗೆ | |
| ಪಂಕ್ತಿಯಲ್ಲಿ | |

**II. ಈ ಕೆಳಗಿನ ಪದಗಳ ವಿಭಕ್ತಿಯನ್ನು ಹೆಸರಿಸಿ :**

1. ಸಮಾಜಕ್ಕೆ : ______________
2. ಸನ್ಮಾನ : ______________
3. ಚಳುವಳಿಗಳು : ______________
4. ಕಾಡಿನ : ______________
5. ಪ್ರಶಸ್ತಿಗಳನ್ನು : ______________
6. ಜ್ಞಾನದಿಂದ : ______________
7. ಸುಕ್ರಿಯ ದೆಸೆಯಿಂದ : ______________
8. ಬಯಲಿನಲ್ಲಿ : ______________
9. ನೃತ್ಯಗಾರಿಕೆಯನ್ನು : ______________
10. ಸಂಸ್ಕೃತಿಯಲ್ಲಿ : ______________

**III. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ :**

1. ಶಾಂತಿ **X** ____________
2. ಏಕ **X** ________________
3. ಚಿಕ್ಕ **X** ______________
4. ಜ್ಞಾನ **X** _____________
5. ಗೌರವ **X** ______________
6. ಒಳಿತು **X** ______________
7. ಅರ್ಥ **X** _____________
8. ಬಂದಾಗ **X** ______________
9. ಸುಗುಣ **X** _____________
10. ಶಕ್ತಿ **X** ______________

**IV . ಈ ಕೆಳಗಿನ ತತ್ಸಮ ಪದಗಳಿಗೆ ತದ್ಭವ ರೂಪ ಬರೆಯಿರಿ :**

1. ವರ್ಷ : ____________
2. ಜ್ಞಾನ : ________________
3. ಭೂಮಿ : ______________
4. ನಿತ್ಯ : _____________
5. ಪುಸ್ತಕ : ______________
6. ಬೇಸಾಯ : ______________
7. ಶಾಲೆ : _____________
8. ಶಕ್ತಿ : ______________
9. ಸಂಸ್ಕೃತ : _____________
10. ಅಕ್ಷರ : ______________

## ಅಭ್ಯಾಸ ಹಾಳೆ – 3

## ನನ್ನ ಹಾಗೆಯೆ

**I. ಕಥೆ ಬರೆಯಿರಿ :**

**ಭರತ – ಬಾಹುಬಲಿಯರ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.**

| |
|---|
| |

**II. ನೀಡಿರುವ ಅಂಶಗಳ ಸಹಾಯದಿಂದ ಕವಿ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ**

| | |
|---|---|
|  | **ಹೆಸರು : ಸು.ರಂ.ಎಕ್ಕುಂಡಿ**<br>**ಜನನ :** 1923<br>**ಸ್ಥಳ :** ಹಾವೇರಿ ಜಿಲ್ಲೆಯ ರಾಣಿಬೆನ್ನೂರು<br>**ಕೃತಿಗಳು :** ಆನಂದ ತೀರ್ಥ, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಬಕುಳದ ಹೂವುಗಳು<br>**ಪ್ರಶಸ್ತಿಗಳು :** ಸೋವಿತ್ ಲ್ಯಾಂಡ್ ನೆಹರು ಪ್ರಶಸ್ತಿ, ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ, ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಮುಂತಾದವು. |

**III. ಬಿಟ್ಟ ಸ್ಥಳ ತುಂಬಿರಿ :**

1. ಭರತ ಬಾಹುಬಲಿಯವರ ತಂದೆ ಹೆಸರು ______________
2. ಶ್ರವಣಬೆಳಗೊಳ __________ ಜಿಲ್ಲೆಯಲ್ಲಿದೆ.
3. ಭರತ ಹಮ್ಮಿನಿಂದ ಬಂದು ______________ ನ ವಿರುದ್ಧ ಸೋತನು.
4. ಬಾಹುಬಲಿಯನ್ನು _____________ ಮೂರ್ತಿ ಎಂದು ವರ್ಣಿಸುವರು.

**IV. ಒಂದು ವಾಕ್ಯದಲ್ಲಿ ಉತ್ತರಿಸಿ :**

1. ಮಹಾಮಸ್ತಕಾಭಿಷೇಕ ಎಷ್ಟು ವರ್ಷಗಳಿಗೊಮ್ಮೆ ನಡೆಯುತ್ತದೆ ?

___________________________________________

2. ಬಾಹುಬಲಿಯು ಭರತನನ್ನು ಯಾವ ಯಾವ ಯುದ್ಧಗಳಲ್ಲಿ ಸೋಲಿಸುತ್ತಾನೆ ?

___________________________________________

3. ಜೈನ ಧರ್ಮದ ಮೊದಲ ತೀರ್ಥಂಕರ ಯಾರು ?

___________________________________________

4. ಭರತ ಬಾಹುಬಲಿಯವರ ಸೆಣೆಸಾಟದ ಫಲಿತಾಂಶವೇನು ?

___________________________________________

**V. ನನ್ನ ಹಾಗೆಯೆ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ :**

## ಅಭ್ಯಾಸ ಹಾಳೆ – 3

**I. ಈ ಕೆಳಗೆ ನೀಡಿರುವ ಪದಗಳನ್ನು ಆರಿಸಿ ದ್ವಿರುಕ್ತಿ, ಜೋಡುನುಡಿ, ನುಡಿಗಟ್ಟುಗಳಾಗಿ ವಿಂಗಡಿಸಿ ಬರೆಯಿರಿ :**

ಹೌದ್ಹೌದು, ಅಬ್ಬಬ್ಬಾ, ಕೂಲಿ ನಾಲಿ, ಬಟ್ಟೆ ಬರೆ, ಕಣ್ಣಿಡು, ಶಾಲೆ ಗೀಲೆ, ಕೈ ಚಾಚು, ಬೇಡ ಬೇಡ, ಮನೆ ಮಠ, ಕಾಲು ಕೆರೆದು, ಬೆನ್ನುತಟ್ಟು, ಬನ್ನಿ ಬನ್ನಿ, ಹಣ್ಣು ಹಂಪಲು, ಪಶು ಪಕ್ಷಿ, ತಲೆದೂಗು, ಅಳಿಲು ಸೇವೆ, ಹತ್ತಿರ ಹತ್ತಿರ, ನೋವು ಗೀವು, ಹಚ್ಚಹಸಿರು, ಕಂಬಿಕೀಳು

| ದ್ವಿರುಕ್ತಿ | ಜೋಡುನುಡಿ | ನುಡಿಗಟ್ಟು |
|---|---|---|
| | | |
| | | |
| | | |
| | | |
| | | |

**II. ಪದ್ಯ ಭಾಗದಲ್ಲಿ ಬಂದಿರುವ ಪ್ರಾಸಪದಗಳನ್ನು ಪಟ್ಟಿ ಮಾಡಿ .**

**ಮಾದರಿ :** ಮೂರ್ತಿಯ–ಕೀರ್ತಿಯ

**III. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ :**

1. ಸೂರ್ಯ : ____________ 2. ಗೆಲುವು : ________________ 3. ಗಾಳಿ : ______________
4. ಜಲ : _____________ 5. ಹೊನ್ನು : ______________ 6. ಅಣ್ಣ : ______________
7. ಯುದ್ಧ : _____________ 8. ಮುಗಿಲು : _____________

**IV. ಈ ಕೆಳಗಿನ ತತ್ಸಮ ಪದಗಳಿಗೆ ತದ್ಭವ ರೂಪ ಬರೆಯಿರಿ :**

1. ಭಕ್ತಿ : ____________ 2. ಕೀರ್ತಿ : _____________ 3. ಯುದ್ಧ : ______________
4. ನಿತ್ಯ : _____________ 5. ರಕ್ತ : ______________ 6. ರಾಜ: ______________
7. ತಪಸ್ವಿ : _____________ 8. ಧ್ಯಾನ : ______________